ಕೊಟ್ಟಿಲ್ಲ. ನಾವು ಬೇರೆ ಮೂಲಗಳಿಂದ ಹಣ ಜೋಡಿಸಿಕೊಂಡು ಅದನ್ನು ನಾವು ಮಾಡಿದ್ದೇವೆ. ಹಾಗೇನಾದರೂ ಪ್ರಾಯಶಃ ನಿಮ್ಮಲ್ಲೇನಾದರೂ ಆ ತರಹದ ಕಟ್ಟಡದ ಕೆಲಸವಾಗಿದೆಯೋ ಗೊತ್ತಿಲ್ಲ.

ಶ್ರೀ ಕೆ.ಪ್ರತಾಪಚಂದ್ರಶೆಟ್ಟಿ: ತಮ್ಮ ಇಲಾಖೆಯ ಬಗ್ಗೆ ನನ್ನ ವಾದ ಏನು ಇದೆ ಎಂದರೆ ಒಂದು ಕಟ್ಟಡವಾಗುತ್ತದೆ, ಕಟ್ಟಡ ಯಾವುದೇ ಮೂಲದಿಂದ ಆಗಲೀ ಅದು ತಮ್ಮ ಇಲಾಖೆಗೆ ಗೊತ್ತಿರಬೇಕಾಗುತ್ತದೆ. ತಮ್ಮ ಇಲಾಖೆಗೆ ಗೊತ್ತಿಲ್ಲದಿದ್ದರೆ ಪುನಃ ಇನ್ನೊಂದು ಸಾರಿ ನೀವು ಮಂಜೂರಾತಿಯನ್ನು ಕೊಡುತ್ತೀರಾ? ಒಂದು ವೇಳೆ ಬಾಲಭವನದ ಮಂಜೂರಾತಿಯಾಗಿದೆ, ಕಟ್ಟಡವಾಗಿದೆ ಉಡುಪಿಯಲ್ಲಿ, ಅದೇ ರೀತಿಯಲ್ಲಿ ಅದಕ್ಕೆ ಬೇಕಾದಂಥ ಸ್ಥಳ ಕಾದಿರಿಸಲಾಗಿದೆ, ಅದಕ್ಕೆ ಅಂದಾಜುಪಟ್ಟಿಯನ್ನು 5 ಲಕ್ಷ ರೂಪಾಯಿಗಳಿಗೆ ತಯಾರು ಮಾಡಲಾಗಿದೆ, ಅದರ ಫೌಂಡೇಷನ್ ಸ್ಟೋನ್‌ನ್ನು 1ನೇ ತಾರೀಖಿನಂದು ಇಟ್ಟಿದೆ. ಆದರೆ ಇದು ಇದೆ ಎನ್ನುವ ಬಹಳ ದಿವಸವಾಗಿರುವುದರಿಂದ ನಾನು ಈ ಪ್ರಶ್ನೆಯನ್ನು ಕೇಳುತ್ತಿದ್ದೇನೆ.

ಶ್ರೀ ಎಂ.ಪಿ.ಪ್ರಕಾಶ್: ಮಾನ್ಯ ಶಾಸಕರು ಕುಂದಾಪುರದಲ್ಲಿ ಅವರು ಬಾಲಭವನದ ಬಗ್ಗೆ ಒಂದು ಶಂಕುಸ್ಥಾಪನೆ ಮಾಡಿದ್ದಾರೆ. ಆದರೆ ಬಾಲಭವನದವರು ಇನ್ನು ಹಣವನ್ನು ತಮಗೆ ಬಿಡುಗಡೆ ಮಾಡಿಲ್ಲ. ತಾವು ಕೂಡ ಈ ವಿಚಾರದಲ್ಲಿ ಒಂದು ಮನವಿಯನ್ನು ಕೊಟ್ಟಮೇಲೆ ಈ ವರ್ಷದಲ್ಲಿ 8 ಲಕ್ಷ ರೂಪಾಯಿ ಕೊಡಬೇಕು ಎಂದು ಅವರು ತೀರ್ಮಾನಮಾಡಿದ್ದಾರೆ. ಆದರೆ ನೀವು ನಿಮ್ಮ ಸ್ವಂತ ಶಕ್ತಿಯಮೇಲೆ ಅಲ್ಲಿ ಬೇರೆ ಬೇರೆ ಹಣವನ್ನು ಜೋಡಿಸಿಕೊಳ್ಳಬಹುದು ಎನ್ನುವ ಕಾರಣವಿರಬಹುದೇನೋ. ನೀವು ಶಂಕುಸ್ಥಾಪನೆ ಮಾಡಿದ್ದೀರಿ. ಆದರೆ ಹಣ ಮಂಜೂರಾತಿಯಾಗಿರಲಿಲ್ಲ. ಆ ಕಾರಣಕ್ಕಾಗಿ ಈ ಪ್ರಶ್ನೆ ಉದ್ಭವವಾಗುವುದಿಲ್ಲ ಎಂದು ಒಂದು ತಾಂತ್ರಿಕವಾಗಿ ತಪ್ಪಾದಂಥಾದ್ದು. ಆಗಿದೆ. ಎಂಟು ಲಕ್ಷ ರೂಪಾಯಿಗಳನ್ನು ಈಗಾಗಲೇ ಮಂಜೂರಾತಿ ಮಾಡಿದ್ದಾರಂತೆ. ನಿಮ್ಮ ಉದ್ದೇಶ ಏನು ಇದೆ ಆ ಪ್ರಶ್ನೆ ಕೇಳುವುದು, ಆ ಹಣ ಬೇಕು ಎನ್ನುವುದು. ಹಣ ಕೊಡುತ್ತೇವೆ ಎನ್ನುವ ಮಾತನ್ನು ಅಧ್ಯಕ್ಷರು ಕೂಡ ಹೇಳಿದ್ದಾರೆ. ಆದ್ದರಿಂದ ಇದನ್ನು ಇಲ್ಲಿಗೆ ಮುಕ್ತಾಯ ಮಾಡಿದರೆ ಸಾಕು.

3. ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು

ಶ್ರೀ ಎಂ.ಪಿ.ಪ್ರಕಾಶ್ (ಮಾನ್ಯ ಗ್ರಾಮಾಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು): ಮಾನ್ಯ ಉಪಾಧ್ಯಕ್ಷರೇ, ಈ ದಿವಸ ಲಿಖಿತ ಮೂಲಕ ಉತ್ತರಿಸುವ 18ನೇ ಪ್ರಶ್ನೆಗಳ ಪಟ್ಟಿಯಲ್ಲಿನ ಒಟ್ಟು 60 ಪ್ರಶ್ನೆಗಳ ಪೈಕಿ 50 ಪ್ರಶ್ನೆಗಳ ಉತ್ತರಗಳನ್ನು ಸದನದ ಮುಂದೆ ಇಡುತ್ತಿದ್ದೇನೆ.

ವಿಷಯ: ಎಮಿಷನ್ ಟೆಸ್ಟಿಂಗ್ ಕೇಂದ್ರಗಳು

1104 (1563)

ಶ್ರೀ ಅಲ್ಲಂ ವೀರಭದ್ರಪ್ಪ (ಕುರುಗೋಡು): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಳ್ಳಾರಿ ಜಿಲ್ಲೆಯಲ್ಲಿರುವ ಹೊಗೆ ತಪಾಸಣೆ ಕೇಂದ್ರಗಳ ಸಂಖ್ಯೆ ಎಷ್ಟು?

ಆ) ಹೊಸದಾಗಿ ಈ ಕೇಂದ್ರಗಳನ್ನು ತೆರೆಯಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಇ) ಬಳ್ಳಾರಿ ಜಿಲ್ಲೆಯಲ್ಲಿರುವ ದ್ವಿಚಕ್ರ ಹಾಗೂ ಇತರೆ ವಾಹನಗಳೇಷ್ಟು?

ಶ್ರೀ ಪಿ.ಜಿ.ಆರ್.ಸಿಂಧ್ಯ (ಸಾರಿಗೆ ಸಚಿವರು):

ಅ) ಬಳ್ಳಾರಿ ಜಿಲ್ಲೆಯಲ್ಲಿ ಒಟ್ಟು 3 ವಾಹನ ವಾಯು ಮಾಲಿನ್ಯ ಪರೀಕ್ಷಣಾ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ.

ಆ) ವಾಹನ ವಾಯು ಮಾಲಿನ್ಯ ತಪಾಸಣಾ ಕೇಂದ್ರಗಳನ್ನು ಸ್ಥಾಪಿಸುವ ಬಗ್ಗೆ ಕರ್ನಾಟಕ ಮೋಟಾರು ವಾಹನ ನಿಯಮಾವಳಿಗಳು 1989ರ ನಿಯಮ 231 (ಬಿ)ರ ಅಡಿಯಲ್ಲಿ ನಿಯಮಗಳನ್ನು ರೂಪಿಸಲಾಗಿದೆ. ಸದರಿ ನಿಯಮಗಳ ಅನುಸಾರ ಅರ್ಜಿ ಸಲ್ಲಿಸಿ, ನಿಯಮದ ಇತರೆ ನಿಬಂಧನೆಗಳನ್ನು ಪೂರೈಸಿದಲ್ಲಿ ಅಂತಹ ಅರ್ಜಿದಾರರಿಗೆ ವಾಹನ ವಾಯು ಮಾಲಿನ್ಯ ಪರೀಕ್ಷಣಾ ಕೇಂದ್ರ ಸ್ಥಾಪಿಸಲು ಅನುಜ್ಞಾ ಪತ್ರ ನೀಡಲಾಗುವುದು.

ಇ) ಬಳ್ಳಾರಿ ಜಿಲ್ಲೆಯಲ್ಲಿ ದಿನಾಂಕ: 28-02-1998ರಂತೆ ಒಟ್ಟು 56,214 ದ್ವಿಚಕ್ರ ವಾಹನಗಳು ಹಾಗೂ 19,325 ಇತರೆ ವರ್ಗದ ವಾಹನಗಳು ಇವೆ.

ವಿಷಯ: ಆರಾಧನ ಯೋಜನೆಯಲ್ಲಿ ಬಿಡುಗಡೆಯಾದ ಹಣ.

1105 (1630)

ಶ್ರೀ ಯು.ಜಿ.ಬಣಕಾರ (ಹಿರೇಕೆರೂರು): ಮಾನ್ಯ ಮುಜರಾಯಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1997-98ನೇ ಸಾಲಿನಲ್ಲಿ ಆರಾಧನಾ ಯೋಜನೆಯಲ್ಲಿ ಬಿಡುಗಡೆ ಮಾಡಿದ ಹಣ ಎಷ್ಟು? (ಜಿಲ್ಲಾವಾರು ವಿವರ ನೀಡುವುದು)

ಆ) ಈ ದರದಲ್ಲಿ ವಿಧಾನ ಸಭಾ ಕ್ಷೇತ್ರವಾರು ವಿಂಗಡಣೆ ಮಾಡಲಾಗಿದೆಯೇ?